SRI A. K. ABDUL SAMAD.—It is a policy matter. We will take care of it.

ಶ್ರೀ ಕೆ. ಬಿ. ಶಿವಯ್ಯ.—ಮಾನ್ಯ ಸಚಿವರು ಉತ್ತರ ಕೊಡುತ್ತಾ, Merit of the case ಎಂದು ಹೇಳಿದರು. ಕೆಲವು ಅಪ್‌ಗ್ರೇಡೆಡ್‌ನಿಂದ ಮಂತಿಗೆ ಬಂದಿದೆ. ಈಗ ಈ ಅಪ್‌ಗ್ರೇಡ್‌ನಲ್ಲಿರತಕ್ಕ ಎಲ್ಲ ಆಸ್ಪತ್ರೆಗಳನ್ನೂ ಸರ್ಕಾರದವರು ಜನರಲ್ ಆಸ್ಪತ್ರೆಗಳಾಗಿ ಮಾಡುತ್ತಾರೆಯೆ ? ಅಥವಾ ಮೆರಿಟ್ ಎನ್ನುವುದರ ಅರ್ಥ ಏನು ಎಂಬುದನ್ನಾದರೂ ಹೇಳುತ್ತಾರೆಯೆ ?

SRI A. K. ABDUL SAMAD.—Now we confine ourselves to Sagar. Regarding policy decision, to make it applicable to all hospitals, I will have to consider it.

SRI H. D. DEVE GOWDA.—You cannot discriminate between Sagar and Holenarsipur because in Holenarasipur, 50% is from public contribution. The Government cannot follow duel policy. I request you to make clear the Government's stand so far as financial assistance is concerned. ಮುಖ್ಯ ಮಂತ್ರಿಯವರ ಕ್ಷೇತ್ರದಲ್ಲಿ ಅಥವಾ ಬೇರೆ ಮಂತ್ರಿಗಳ ಕ್ಷೇತ್ರಗಳಲ್ಲಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರೇ ಉತ್ತರ ಹೇಳಬೇಕು.

SRI K. BHASKAR NAIDU.—The whole State looks upon Sri Deve Gowdas' constituency for any thing, because it is complete in all respects. But I wonder whether he has still something to be done.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಡೆ.—ಸಾಗರಕ್ಕೇ ವಿಶೇಷವಾಗಿ ಏನೂ ಕೊಟ್ಟಿಲ್ಲ. ಪಬ್ಲಿಕ್ ಕಾಂಟ್ರಿಬ್ಯೂಷನ್ ಕೊಟ್ಟಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ; ಏನೆಂದರೆ, ಇದು ಸೋರಿ ಹೋಗುತ್ತಿರುವ ಹಳೆಯ ಕಟ್ಟಡವನ್ನು ರಿಪೇರಿಗೆ ತೆಗೆದು ಕೊಳ್ಳುವ ಬಗ್ಗೆ. ಈಗ ಸರ್ಕಾರದವರು ಮಂಜೂರು ಮಾಡಿರತಕ್ಕ ಹಣದಲ್ಲಿ ಮೂರನೇ ಒಂದು ಭಾಗದಷ್ಟು ಹಣವನ್ನು ಈ ಕಟ್ಟಡದ ರಿ ಪೇರಿಗಾಗಿ ಒದಗಿಸಿಕೊಡದಿದ್ದರೆ ಅದರ ಕೆಲಸ ಆಗುವುದಿಲ್ಲ. ಈಗ ಒದಗಿಸಿರುವ ೬೫ ಸಾವಿರ ರೂಪಾಯಿ ಏನೇನೂ ಸಾಲುವುದಿಲ್ಲ. ಆದ್ದರಿಂದ ನಾನು ಹೇಳಿದಂತೆ ತಾವು ಹೆಚ್ಚು ಹಣವನ್ನು ಇದಕ್ಕೆ ಕೊಟ್ಟು ಕೆಲಸ ಪ್ರಾರಂಭವಾಗುವಂತೆ ಮಾಡುತ್ತೀರಾ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ನಾನು ಈಗಾಗಲೇ ಹೇಳಿದಂತೆ ಈ ಕೆಲಸವನ್ನು ಮುಂದಿನಸಾರಿ ತೆಗದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದಕ್ಕೆ ಪಿ. ಡಬ್ಲ್ಯೂ. ಡಿ. ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಬೇಕು.

Free and fair enquiry aganist Officers/Officials

502 SRI T. B. JAYACHANDRA (Kallambella).—Will the Chief Minister be pleaced to state.—

whether it is not the administrative propriety of the Government to trnsfer or to keep the officer and the other concerned officials whose integrity is in question, under suspension to ensure free and fair enquiry against them?

SRI R. GUNDU RAO (Chief Minister).—

It depends upon the circumstances of the case. Wherever it is considerd necessary to keep person under suspension, it is done,

ಶ್ರೀ ಟಿ.ಬಿ. ಜಯಚಂದ್ರ.—ಸ್ಪಾ, ನಾನು ೩-೪ ಪ್ರಶ್ನೆಗಳನ್ನು ಒಟ್ಟಿಗೇ ಹಾಕಿದ್ದೆ. ಆದರೆ ಕೇವಲ ಒಂದು ಮಾತ್ರ ಬಂದಿದೆ. ಆದ್ದರಿಂದ ನಾನು ಕೆಲವು ಸಲಹೆಗಳನ್ನು ಮಾತ್ರ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ನಾವು ಐ.ಎ.ಎಸ್, ಕೆ.ಎ.ಎಸ್. ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಕೈಕೆಳಗಿರತಕ್ಕ ಅಧಿಕಾರಿಗಳನ್ನು ಅಂದರೆ ತಹಸೀಲ್ದಾರ್, ಬಿ.ಡಿ.ಓ. ಇಂಥವರನ್ನು ಮತ್ತು ಇತರೇ ನೌಕರರನ್ನು ಸಸ್ಪೆಂಡ್ ಮಾಡುತ್ತೀರಿ. ೬ ೭ ವರ್ಷಗಳಾದರೂ ಅವರ ಬಗ್ಗೆ ಎನ್‌ಕ್ವೈರಿ ಮಾಡಿಸುವುದಿಲ್ಲ, ಅವರನ್ನು ಕೆಲಸಕ್ಕೂ ತೆಗೆದುಕೊಳ್ಳುವುದಿಲ್ಲ, ಅವರ ಸಂಬಳದಲ್ಲಿ ೭೫ ಪರ್ಸೆಂಟ್ ಸಬ್ಸಿಸ್ಟೆನ್ಸ್ ಅಲೋಯನ್ಸ್‌ನ್ನು ಕೊಡುತ್ತಿರುತ್ತೀರಿ. ಅನೇಕ ವರ್ಷಗಳ ನಂತರ ಇವರನ್ನು ಎನ್‌ಕ್ವೈರಿ ಮಾಡಿ ಇವರಲ್ಲಿ ಏನೂ ತಪ್ಪಿಲ್ಲವೆಂದು ರುಜುವಾತಾದರೆ, ಅದುವರೆಗೆ ಅವರಿಗೆ ಕೊಡಬೇಕಾಗಿದ್ದ ಇನ್‌ಕ್ರಿಮೆಂಟ್ಸ್, ಪ್ರೋಮೋಷನ್ಸ್, ಎಲ್ಲಾ ಕೊಟ್ಟು ಕೆಲಸಕ್ಕೆ ಮತ್ತೆ ಸೇರಿಸಿಕೊಳ್ಳುತ್ತೀರಿ. ಈ ರೀತಿ ಮಾಡುವುದರಿಂದ ಒಬ್ಬೊಬ್ಬ ನೌಕರರಿಗೂ ಸಾವಿರಾರು ರೂಪಾಯಿ ಸಂಬಳವನ್ನು ಸರ್ಕಾರದವರು ಕಟ್ಟಿ ಕೊಡಬೇಕಾಗುತ್ತದೆ. ಇದು ಸರ್ಕಾರಕ್ಕೆ ತುಂಬಲಾರದ ನಷ್ಟ. ಆದ್ದರಿಂದ ಯಾವ ಸರ್ಕಾರಿ ನೌಕರರನೇ ಆಗಲಿ ಸಸ್ಪೆಂಡ್ ಆದ ೬ ತಿಂಗಳೊಳಗಾಗಿ ಕಾನೂನು ಪ್ರಕಾರ ಎನ್‌ಕ್ವೈರಿ ಮಾಡಿ ಅಂತಿಮ ತೀರ್ಮಾನ ತೆಗೆದು ಕೊಳ್ಳುತ್ತೀರಾ? ಇದರ ಬಗ್ಗೆ ಸರ್ಕಾರದ ಸ್ವಷ್ಟ ನಿಲುವು ಏನು ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.— ಮಾನ್ಯ ಸದಸ್ಯರ ಅಭಿಪ್ರಾಯ ನಿಜವಾಗಿಯೂ ಒಳ್ಳೆಯದೆ ಮತ್ತು ಒಪ್ಪತಕ್ಕದಂ. ಕಾನೂನು ಪ್ರಕಾರ ಸಸ್ಪೆಂಡ್ ಆದ ಯಾವ ಸರ್ಕಾರಿ ನೌಕರರನ್ನೇ ಆಗಲಿ ೬ ತಿಂಗಳೊಳಗಾಗಿ ಎನ್‌ಕ್ವೈರಿ ಮಾಡಬೇಕೆಂದಿದೆ. ನಾನಾ ಕಾರಣಗಳಿಂದ ಈ ಎನ್‌ಕ್ವೈರಿ ಪೂರ್ತಿಯಾಗಂವುದಿಲ್ಲ. ಕೆಲವು ಸಂದರ್ಭದಲ್ಲಿ ಇಲಾಖೆಯವರಿಂದ ಎನ್‌ಕ್ವೈರಿ ಆಗಬೇಕು, ವಿಜಿಲೆನ್ಸ್‌ನಿಂದ ಎನ್‌ಕ್ವೈರಿ ಆಗಬೇಕಂ, ಸಿ.ಓ.ಡಿ. ಯಂವರಿಂದ ಎನ್‌ಕ್ವೈರಿ ಆಗಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಕಾಲಾವಕಾಶ ತೆಗೆದು ಕೊಳ್ಳುತ್ತದೆ. ಕಾರಣ ಎನ್‌ಕ್ವೈರಿಗೆ ಬೇಕಾದ ಸಾಕ್ಷಿ, ಪುರಾವೆಗಳನ್ನು ಒದಗಿಸಿಕೊಡಬೇಕಾಗುತ್ತದೆ. ೬ ತಿಂಗಳಲ್ಲಿ ಎನ್‌ಕ್ವೈರಿ ಆಗಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಪ್ರೊಸೀಜರಲ್ ಡಿಲೇ ಆಗಬಾರದು, ಈ ಎನ್‌ಕ್ವೈರಿ ಮಾಡುವುದು ಬಹಳ ನಿಧಾನವಾದರೆ ಏನಾಗುತ್ತದೆಂದರೆ, ನಾವು ಎನ್‌ಕ್ವೈರಿಗೆ ನೇಮಿಸಿದ್ದ ಅಧಿಕಾರಿಗಳು ಬದಲಾವಣೆ ಆಗುತ್ತಾರೆ, ಆಗ ಇನ್ನೊಬ್ಬ ಅಧಿಕಾರಿ ಆ ಜಾಗಕ್ಕೆ ಬರುತ್ತಾನೆ. ಅವನು ಮತ್ತೆ ಈ ಕೇಸನ್ನೆಲ್ಲಾ ಸ್ಟಡಿ ಮಾಡಬೇಕಾಗುತ್ತದೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇಂಥಾ ಅನಾವಶ್ಯಕ ತೊಂದರೆಗಳಾಗುತ್ತಿರುವ ಬಗ್ಗೆ ನಾನು ಚೀಫ್ ಸೆಕ್ರೆಟರಿ ಮತ್ತು ಲಾ ಸೆಕ್ರೆಟರಿಯವರನ್ನು ಬರಮಾಡಿಕೊಂಡು ಈ ವಿಚಾರವನ್ನು ಚರ್ಚೆ ಮಾಡುತ್ತೇನೆ. ಏಕೆಂದರೆ ೩ ವರ್ಷಗಳ ವರೆಗೆ ಒಬ್ಬ ಅಧಿಕಾರಿಯನ್ನು ಸಸ್‌ಪೆನ್‌ಷನ್‌ನಲ್ಲಿಟ್ಟು ಅನಂತರ ಎನ್‌ಕ್ವೈರಿ ಮಾಡಿದಾಗ ಅವರಲ್ಲಿ ಏನೂ ತಪ್ಪಿಲ್ಲವೆಂದು ಎನ್‌ಕ್ವೈರಿ ಆಫೀಸರ್‌ರವರು ವರದಿಯನ್ನು ಕೊಟ್ಟರೆ ಆಗ ಆ ಅಧಿಕಾರಿಗೆ ಅಥವಾ ನೌಕರನಿಗೆ ಅವನ ಸರ್ವೀಸ್‌ನಲ್ಲಿ ಸಂಬಳ, ಪ್ರೊಮೋಷನ್, ಇನ್‌ಕ್ರಿಮೆಂಟ್ಸ್, ಇತ್ಯಾದಿ ಏನೇನು ಕೊಡಬೇಕಾಗಿರುತ್ತದೋ ಅದನ್ನೆಲ್ಲಾ ಕೊಡಬೇಕಾಗಿರುತ್ತದೆ. ಇಂಥ ಒಂದು ಕೆಟ್ಟ ಪದ್ಧತಿ ಮುನಿಸಿಪಾಲಿಟಿಗಳಲ್ಲೂ ಇದೆ, ಸರ್ಕಾರದಲ್ಲೂ ಇದೆ, ಮತ್ತು ಇನ್ನೂ ಇತರೆ ಸಂಘ ಸಂಸ್ಥೆಗಳಲ್ಲೂ ಇದೆ. ಮಾನ್ಯ ಸದಸ್ಯರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದು ಉತ್ಪ್ರೇಕ್ಷೆ ಏನೂ ಆಗಿಲ್ಲ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾನು ಒಂದೇ ಒಂದು ಪ್ರಶ್ನೆಯನ್ನು ಹಾಕುವುದೇನೆಂದರೆ, ನಮ್ಮ ರಾಜ್ಯದಲ್ಲಿ ಎಷ್ಟು ಜನ ಅಧಿಕಾರಿಗಳು, ನೌಕರರು ಎಷ್ಟೆಷ್ಟು ವರ್ಷಗಳಿಂದ ಸಸ್‌ಪೆನ್‌ಷನ್‌ನಲ್ಲಿದ್ದಾರೆ, ಕೆಲಸವನ್ನೇ ಮಾಡದೇ ಸಂಬಳವನ್ನು ತೆಗೆದುಕೊಳ್ಳುತ್ತಿದ್ದಾರೆ ಅಂಥವರಿಗೆ ನ್ಯಾಯವನ್ನು ದೊರಕಿಸಿಕೊಡುತ್ತೀರಾ ಎಂದು ಮಾನ್ಯ ಆರೋಗ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇವರಿಗೆ ಡೈರೆಕ್ಟೊರೇಟ್ ಇದ್ದ ಹಾಗೆಯೇ ಇಂಥ ಕೇಸುಗಳನ್ನು ವಿಚಾರಣೆ ಮಾಡುವ ಸಲುವಾಗಿ ಈ ಇಲಾಖೆಗೆ ಸಂಬಂಧವೇ ಇಲ್ಲದಿರತಕ್ಕ ಇನ್ನೊಂದು ಇಲಾಖೆಯವರನ್ನು ನೇಮಕ ಮಾಡಿ ಒಂದು ಸಪರೇಟ್ ವಿಂಗ್‌ನ್ನು ಮಾಡುತ್ತೀರಾ. ಕಾನೂನು ಪ್ರಕಾರ ೬ ತಿಂಗಳೊಳಗಾಗಿ ಎನ್‌ಕ್ವೈರಿ ಮುಗಿಸಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಯಾವ ಅಧಿಕಾರಿಯನ್ನು ಅಥವಾ ನೌಕರನನ್ನು ವಿಚಾರಣೆ ಮಾಡಬೇಕೆಂದಿರುತ್ತೀರಿ ಅವರ ಮೇಲಿನ ಅಧಿಕಾರಿಯನ್ನೇ ಎನ್‌ಕ್ವೈರಿ ಆಫೀಸರ್ ಆಗಿ ನೇಮಿಸುತ್ತೀರಿ. ಇದು ಸರಿಯಲ್ಲ.

ಶ್ರೀ ಆರ್. ಗುಂಡೂರಾವ್.—ವಿಜಿಲೆನ್ಸ್, ಸಿ.ಐ.ಡಿ. ಎಲ್ಲಾ ಇದೆ. ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಬೊಮ್ಮಾಯಿಯವರು, ಒಳ್ಳೆಯ ಲಾಯರ್ ಆಗಿದ್ದಾರೆ. ಅವರು ಇಂಥ ಕೇಸುಗಳ ಬಗ್ಗೆ ಯಾವರೀತಿ ಮಾಡಬೇಕೆಂದು ಸಲಹೆ ನೀಡಬೇಕು. ಏಕೆಂದರೆ ಬಿ.ಡಿ.ಓ.ಗಳನ್ನು ಎನ್‌ಕ್ವೈರಿ ಮಾಡಲು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಹಾಕುತ್ತಾರೆ, ಕೆಲವುಸಾರಿ ಬಿ. ಡಿ. ಓ. ಮೇಲೆ ಕಂಪ್ಲೈಂಟ್ ಬಂದರೆ ಇನ್ನೊಬ್ಬ ಬಿ.ಡಿ.ಓ. ಅವರನ್ನೇ ಎನ್‌ಕ್ವೈರಿಗೆ ಹಾಕುತ್ತಾರೆ. ಇಂಥಾದ್ದೆಲ್ಲಾ ಇದೆ. ಆದರೂ ತಾವು ಹೇಳಿದ ವಿಚಾರವನ್ನು ನಾನು ತೀವ್ರವಾಗಿ ಆಲೋಚಿಸುತ್ತೇನೆ.

Alleged Misappropriation of funds in Kannada Sahitya Parishath

533 SRI S. LINGAIAH (Sira).—Will the Chief Minister be pleased to state.—

(a) the names of the various items and the quantum of amount paid for each item by the Government to the Kannada Sahithya Parishath during 1979-80 ;

(b) whether the said amount has been misappropriated ;

(c) wheter allegations made by the rebel literators about the misuse of the funds by the Kannada Sahithya Parishath have come to the notice of Government.?

SRI R. GUNDU RAO (Chief Minister).—

(a) A sum of Rs. 8 lakhs is given to the Kannada Sahithya Parishat under the following items during 1979-80 ;

(i) Development Programmes	Rs,	5.00 lakhs
(ii) Kannada-Kannada Dictionary (Scheme)	Rs.	2.00 lakhs
(iii) Annual grants	Rs.	1.00 lakhs
Total		8.00 lakhs

(b) No.

(c) No allegatiens have been received by the Government in this regard.

ಶ್ರೀ ಎಸ್. ಲಿಂಗಯ್ಯ.—ಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಣ ದುರುಪಯೋಗ ಆಗಿಲ್ಲ ವೆಂದು ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಅಲ್ಲದೆ ಬಂಡಾಯ ಸಾಹಿತಿಗಳಿಂದ ಸರ್ಕಾರಕ್ಕೆ ಯಾವ ಆರೋಪಗಳೂ ಬಂದಿಲ್ಲವೆಂದು ಹೇಳಿದ್ದೀರಿ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಣ ದುರುಪಯೋಗ ವಾಗುತ್ತಿದೆಯೆಂದು ಬಂಡಾಯ ಸಾಹಿತಿಗಳಿಂದ ನನಗೆ ತಿಳಿದು ಬಂದಿದೆ. ಅವರು ಬರವಣಿಗೆಯ ಮುಖಾಂತರ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೂ ಕೂಡ ದಿನನಿತ್ಯ ಪತ್ರಿಕೆಗಳಲ್ಲಿ ಈ ವಿಚಾರ ಬರುತ್ತಿರುವುದನ್ನು ನಾವು ನೋಡುತ್ತಿದ್ದೇನೆ. ಸರ್ಕಾರ ತಾನು ಕೊಟ್ಟಂಥ ಹಣದ ವಿಚಾರದಲ್ಲಿ ಗಮನ ಹರಿಸಿ, ಆ ಹಣ ಸೂಕ್ತ ರೀತಿಯಲ್ಲಿ ಸದ್ವಿನಿಯೋಗವಾಗುತ್ತಿದೆಯೇ ಎಂಬುದನ್ನು ನೋಡಬೇಕಾದ್ದು ಸರ್ಕಾರದ ಕರ್ತವ್ಯ. ಈಗ ಪತ್ರಿಕೆಗಳಲ್ಲಿ ಬರುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ? ಎಂಬುದನ್ನು ನಾನು ಕೇಳಬಯಸುತ್ತೇನೆ.